## ವೀಕ್ಷಕರಿಗೆ ಮಂಕುಬೂದಿ ಎರಚಬೇಡಿ

ಟೀವಿ ವಾಹಿನಿಗಳು ತಮ್ಮ ಧಾರಾವಾಹಿಗಳ ವೀಕ್ಷಕರನ್ನು ಹೆಚ್ಚಿಸಲು ಅನೇಕ ಕಸರತ್ತುಗಳನ್ನು ಮಾಡುತ್ತಿರುತ್ತವೆ. 'ಯಜಮಾನ', 'ವಧು' ಶುರುವಾದ ಸಂದರ್ಭದಲ್ಲಿ ಕೊನೆಗೆ ಕೇಳುವ ಪ್ರಶ್ನೆಗೆ ಸರಿ ಉತ್ತರ ನೀಡಿದ ಅದೃಷ್ಟಶಾಲಿಗಳಿಗೆ ಎಲ್.ಇ.ಡಿ. ಟೀವಿ, ಚಿನ್ನದ ನಾಣ್ಯ ಕೊಡುವ ಬಗ್ಗೆ ಪ್ರಕಟಿಸಿದ್ದರು. ನಾನು ಟೀವಿಯಿಂದ ಕದಲದೆ ಸರಿಯಾದ ಉತ್ತರವನ್ನು ಕಳಿಸಿದ್ದೆ. ಈ ಬಗ್ಗೆ ಆಸಕ್ತಿ ಇರದ ನಮ್ಮ ಮನೆಯವರಿಂದಲೂ ಒತ್ತಾಯ ಮಾಡಿ ಮಿಸ್ಡ್ ಕಾಲ್ ಮಾಡಿಸುತ್ತಿದ್ದೆ. ಒಂದೆರಡು ವಾರ ವಿಜೇತರ ಹೆಸರು ತೆರೆಯ ಮೇಲೆ ಮಿಂಚಿ ಮಾಯವಾದವು. ಅಷ್ಟೇ.

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಬೇಡ ಅತಿ, ವಿಶೇಷಕ್ಕೂ ಇರಲಿ ಮಿತಿ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮ ವಿಶ್ವದಾಖಲೆ ಮಾಡುತ್ತಿರುವುದು ಬಹಳ ಸಂತೋಷದ ವಿಷಯ. ಅಪರೂಪಕ್ಕೊಮ್ಮೆ ವಿಶೇಷ ಸಂಚಿಕೆಗಳನ್ನು ಉಣಬಡಿಸುತ್ತಿದ್ದ ಕಾರ್ಯಕ್ರಮದಲ್ಲಿ ವಿಶೇಷ ಸಂಚಿಕೆಗಳ ಸುರಿಮಳೆಯೇ ಆಗುತ್ತಿದೆ. ಸ್ಟುಡಿಯೊದಲ್ಲಿ ಏರ್ಪಡಿಸುತ್ತಿದ್ದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಸರಿ ಉತ್ತರಕ್ಕೆ ನೀಡುವ ಪುಸ್ತಕ ಬಹುಮಾನ ನೀಡುವ ಪದ್ಧತಿ ಮುಂದುವರಿಯಲಿ. ನಮ್ಮ ನೆಚ್ಚಿನ ಕಾರ್ಯಕ್ರಮ ತನ್ನ ಸಹಜತೆಯನ್ನು ಉಳಿಸಿಕೊಳ್ಳಲಿ ಮತ್ತು ವಿಶೇಷ ಸಂಚಿಕೆಗಳಿಗೆ ಮಿತಿಯಿರಲಿ ಎಂದು ಆಶಿಸುತ್ತೇನೆ.

—ಆಶಾ ಅಪ್ರಮೇಯ, ದಾವಣಗೆರೆ

## ಉಪಯುಕ್ತ ರೈತ ಸಂತೆ

ಚಂದನ ವಾಹಿನಿ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ಯುಗಾದಿ ಹಬ್ಬದ ಪ್ರಯುಕ್ತ ವಿಶೇಷವಾಗಿ ರೂಪಿಸಿತು. ಅದರಲ್ಲಿ ರೈತರ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲಾಯಿತು. ಬೇಳೆ–ಕಾಳು, ಸಿರಿಧಾನ್ಯ, ಮಹಿಳಾ ಸ್ವಸಹಾಯ ಸಂಘದಿಂದ ತಯಾರಿಸಿದ ವಸ್ತುಗಳು, ಗುಡಿಗಾರಿಕೆ–ಕೈಮಗ್ಗದ ಉತ್ಪನ್ನಗಳನ್ನು ಅಲ್ಲಿ ಮಾರಾಟ ಮಾಡಲಾಯಿತು. ರೈತ ಗ್ರಾಹಕ ಸಂತೆಯಲ್ಲಿ ಮನರಂಜನೆ ಜೊತೆಗೆ ಕಾರ್ಯಕ್ರಮದ ಉದ್ದೇಶದಂತೆ ರಸಪ್ರಶ್ನೆಯನ್ನು ಸಾರ್ವಜನಿಕವಾಗಿ ಏರ್ಪಡಿಸಿದ್ದು ತುಂಬ ಚೆನ್ನಾಗಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

ವಾರದ ಪತ್ರ

## ಡಿಜಿಟಲ್ ಕಾಲದ ಕಂದಮ್ಮಗಳು!

ನಮ್ಮ ಬಾಲ್ಯದಲ್ಲಿ ದೊಡ್ಡವರಾದ ಮೇಲೆ ಏನಾಗ ಬಯಸುತ್ತೀರಾ ಎಂದು ಮಕ್ಕಳಿಗೆ ಕೇಳಿದರೆ – ಡಾಕ್ಟರ್, ಪೊಲೀಸ್, ಎಂಜಿನಿಯರ್, ಐಎಎಸ್, ಪೈಲೆಟ್ ಎಂಬ ಉತ್ತರ ದೊರೆಯುತ್ತಿತ್ತು. ಮೊನ್ನೆ ಝೀ ಕನ್ನಡದ ರಿಯಾಲಿಟಿ ಶೋ ಒಂದರಲ್ಲಿ ನಿರೂಪಕಿ ಬಾಲಕನೊಬ್ಬನಿಗೆ 'ನೀನು ದೊಡ್ಡವನಾದ ಮೇಲೆ ಏನಾಗ ಬಯಸುತ್ತೀಯಾ' ಎಂದು ಕೇಳಿದಾಗ ಆ ಹುಡುಗ ಕೂಡಲೇ 'ಯುಟ್ಯೂಬರ್' ಆಗುತ್ತೇನೆ ಎಂದು ಹೇಳಿದ್ದು ಕೇಳಿ ಆಶ್ಚರ್ಯವಾಯಿತು. ಈಗಿನ ಪೀಳಿಗೆಯ ಮಕ್ಕಳಿಗೆ ಸಾಮಾಜಿಕ ಜಾಲತಾಣ ಅನ್ನೋದು ಎಷ್ಟೊಂದು ಪ್ರಭಾವ ಬೀರಿದೆ. ಮಕ್ಕಳ ಮನಸ್ಸನ್ನು ಹೇಗೆ ಆವರಿಸಿಕೊಂಡಿದೆ ಎನಿಸಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ವಾರ ಕಾಲದ ಸ್ನಾನ!

ಝೀ ಕನ್ನಡದ 'ಬ್ರಹ್ಮಗಂಟು' ಧಾರಾವಾಹಿಯಲ್ಲಿ ಚಿರೂ, ದೀಪಾ ಜೊತೆ ಮಾವನ ಮನೆಗೆ ಬಂದಾಗ ದೀಪಾ ಸ್ನಾನಕ್ಕೆ ಹೋಗುವ ದೃಶ್ಯ ಇತ್ತು. ಒಂದು ವಾರ ಸ್ನಾನ ಮಾಡಿಸುವುದನ್ನೇ ತೋರಿಸಲಾಯಿತು. ಸ್ನಾನ ಮಾಡಿಸುವದಕ್ಕೆ ಒಂದು ವಾರ ಬೇಕಾಯಿತು. ಈ ಮಟ್ಟಿಗೆ ಪ್ರೇಕ್ಷಕರ ಸಹನೆಯನ್ನು ಪರೀಕ್ಷಿಸುವುದು ಸರಿಯಲ್ಲ.

—ಸಿ.ಕೆ. ಗಣಪ್ಪನವರ, ಮುಂಡರಗಿ

## ಯುಗಾದಿಗೆ ಮೆರುಗು ಜುಗಲಬಂದಿ

ಝೀ ಕನ್ನಡದ 'ಸರಿಗಮಪ' ಶೋನಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಸೀನಿಯರ್ ಮತ್ತು ಜೂನಿಯರ್ ಗಾಯಕರು ಒಟ್ಟಿಗೆ ಹಾಡಿದರು. ತೀರ್ಪುಗಾರರು ಯುಗಾದಿ ಮಹತ್ವದ ಬಗ್ಗೆ ತಮ್ಮ ಅಭಿಪ್ರಾಯ ಹಂಚಿಕೊಂಡರು. ವೇದಿಕೆಯಲ್ಲಿ ಬೇವು ಬೆಲ್ಲದ ವಿತರಣೆ ಅರ್ಥಪೂರ್ಣವಾಗಿತ್ತು. ಶ್ರೀಹರ್ಷ–ಮನೋಜ್ ಜೋಡಿ 'ಗುರು ಶಿಷ್ಯರು' ಸಿನಿಮಾದ 'ದೊಡ್ಡವರೆಲ್ಲ ಜಾಣರಲ್ಲ' ಗೀತೆಯನ್ನು ಹಾಡಿ ಹೆಜ್ಜೆ ಹಾಕಿದ್ದು ಪ್ರೇಕ್ಷಕರನ್ನೂ ಕುಣಿಯುವಂತೆ ಮಾಡಿತು.

—ಬಿ. ಗಂಗಾಧರ್, ಬೆಂಗಳೂರು

ಝೀ ಕನ್ನಡದ 'ಸರಿಗಮಪ' ಯುಗಾದಿ ಸಂಚಿಕೆ ತುಂಬಾ ಚೆನ್ನಾಗಿತ್ತು. ಸ್ಪರ್ಧಿಗಳು, ಆಹ್ವಾನಿತ ಗಾಯಕರು ಅದ್ಭುತವಾಗಿ ಹಾಡಿದರು. ಶ್ರೀಹರ್ಷ 'ದೊಡ್ಡವರೆಲ್ಲ ಜಾಣರಲ್ಲ' ಹಾಡಿಗೆ ಅದ್ಭುತವಾಗಿ ನಟಿಸಿದರು. ಮನೋಜ್ ಭಾರ್ಗವ್ ಎಂಬ ಗಾಯಕ ಶ್ರೀಹರ್ಷ ಜೊತೆಗೆ ಧ್ವನಿಗೂಡಿಸಿದ್ದು ಮೆರುಗು ನೀಡಿತು.

—ರಾಘವೇಂದ್ರ ಜೋಯಿಸ್, ಮೈಸೂರು

ಅದ್ಭುತ ಪ್ರತಿಭೆಗಳ 'ಸರಿಗಮಪ' ಯುಗಾದಿ ಸಂಚಿಕೆ ಸೊಗಸಾಗಿ ಮೂಡಿಬಂತು. ಶ್ರೀಹರ್ಷ ಹಾಗೂ ಮನೋಜ್ ಭಾರ್ಗವ್ ಅವರ ಹಾಡುಗಾರಿಕೆ ಹಾಗೂ ಅಭಿನಯ ಮನೋಜ್ಞವಾಗಿತ್ತು.

—ಅನ್ನಪೂರ್ಣಮ್ಮ, ಬೆಂಗಳೂರು

## ಶುಭೋದಯದಲ್ಲಿ ಯಕ್ಷ ರಂಗು

ಚಂದನದ 'ಶುಭೋದಯ'ದಲ್ಲಿ ಯಕ್ಷಗಾನದ ಯುವ ಕಲಾವಿದೆ ಅಶ್ವಿನಿ ಕೊಂಡದಕುಳಿ ಸಂದರ್ಶನ ತುಂಬ ಚೆನ್ನಾಗಿ ಮೂಡಿಬಂತು. ಯಕ್ಷಗಾನ ರಂಗದಲ್ಲಿ ಅವರ ಸಾಧನೆ ಅಪೂರ್ವವಾಗಿದೆ. ಮಾತುಕತೆಯ ಜೊತೆಗೆ ಅಂಬೆಯ ಪಾತ್ರವೊಂದನ್ನು ಅನುಭವಿಸಿ ಅವರು ತೋರಿಸಿದರು. ಅದನ್ನು ನೋಡಿದಾಗ ಅವರ ನಟನೆ ಮತ್ತು ಭಾವಪ್ರಕಟಣೆ ನೈಜವಾಗಿ ಗೋಚರಿಸಿತು. ಅಶ್ವಿನಿ ಅವರಿಗೆ ಅಭಿನಂದನೆಗಳು.

—ರಾಮಮೂರ್ತಿ, ಮೈಸೂರು



## ಸಂಜೆ ಕಾರ್ಯಕ್ರಮ ಸುಂದರವಿರಲಿ

ಕಲರ್ಸ್ ಕನ್ನಡದಲ್ಲಿ ಹೊಸ ಕಾರ್ಯಕ್ರಮಗಳನ್ನು ರೂಪಿಸುತ್ತಿರುವುದು ಸಂತೋಷದ ಸಂಗತಿ. ಇತ್ತೀಚೆಗೆ 'ಪವರ್– ಪ್ಲೇ' ಎಂಬ ಕಾರ್ಯಕ್ರಮವನ್ನು ನೀಡುತ್ತಿದ್ದಾರೆ. ಟ್ಯಾಗ್‌ಲೈನ್‌ನಲ್ಲಿ 'ಕಲರ್‌ಫುಲ್ ಕತೆಗಳು' ಎಂದು ಬಿಂಬಿಸಲಾಗುತ್ತಿದೆ. ಆ ಕತೆಗಳ ಪವರ್ ಕಾಯುತ್ತಾ ಕೂತಿದ್ದ ನಮಗೆ ಅದರಿಂದ ನಿರಾಸೆ ಆಯಿತು.

ಬಹುಶಃ ಕನ್ನಡದ ಬಹುತೇಕ ಎಲ್ಲ ಧಾರಾವಾಹಿಗಳ ಗೋಳಾಟವನ್ನೇ ಇಲ್ಲಿಗೆ ತರುತ್ತಿದ್ದಾರೋ ಏನೋ ಎಂದು ಅನ್ನಿಸುತ್ತಿದೆ. ಸಂಜೆಯ ಒಂದು ಕಾರ್ಯಕ್ರಮವನ್ನು ಸುಂದರವಾಗಿ ರೂಪಿಸಬಹುದಿತ್ತು.

—ಗಾಯತ್ರಿ ಶ್ರೀನಾಥ್, ಶಿವಮೊಗ್ಗ